(1)

(55)

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಆ/G. 6431 /12-13 (PSRG) ಪ್ರಇಂ/PR/982/12-13.

ಆಯುಕ್ತರವರ ಕಛೇರಿ
ಎನ್.ಆರ್. ವೃತ್ತ, ಬೆಂಗಳೂರು-02
ದಿನಾಂಕ: 09.11.2012 15

## ಸುತ್ತೋಲೆ

**ವಿಷಯ:-** ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಕತ್ತರಿಸಿದ ಭಾಗಗಳನ್ನು ದುರಸ್ಥಿಗೊಳಿಸುವುದು ಮತ್ತು ಪಾಲಿಕೆ ಆಸ್ತಿಗಳ ನಿರ್ವಹಣೆ ಬಗ್ಗೆ.

********

ಪಾಲಿಕೆಯ 8 ವಲಯಗಳಲ್ಲಿ ಆಯಾಯ ಉಪವಿಭಾಗ ಕಛೇರಿಯಿಂದ ಖಾಸಗಿ ಕಟ್ಟಡಗಳಿಗೆ ನೀರು ಸರಬರಾಜು, ಒಳಚರಂಡಿ ಮತ್ತು ವಿದ್ಯುತ್ ಸಂಪರ್ಕಕ್ಕಾಗಿ ರಸ್ತೆ ಕತ್ತರಿಸಲು ಅನುಮತಿ ನೀಡುತ್ತಿರುವುದು ಸರಿಯಷ್ಟೆ. ಆದರೆ ಈ ತರಹ ರಸ್ತೆ ಕತ್ತರಿಸಿದ ಭಾಗಗಳನ್ನು ಸಮರ್ಪಕವಾಗಿ ಮತ್ತು ತುರ್ತಾಗಿ ದುರಸ್ಥಿಗೊಳಿಸಿ ಮೇಲ್ಮೈಯನ್ನು ಯಥಾ ಸ್ಥಿತಿಗೆ ತರುವಲ್ಲಿ ವಿಳಂಭವಾಗುತ್ತಿದ್ದು ಸಾರ್ವಜನಿಕರಿಗೆ ಹಾಗೂ ಸುಗಮ ವಾಹನ ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದು ಕಂಡುಬಂದಿರುತ್ತದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರಸ್ತೆ ಕತ್ತರಿಸಿದ ಭಾಗಗಳನ್ನು ಆದಷ್ಟು ಶೀಘ್ರ ವಿಶಿಷ್ಟ ವಿವರಣೆಯಂತೆ (As per IRC: 98-1997) ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳುವಂತೆ **ವಲಯ ಜಂಟಿ/ಅಪರ ಆಯುಕ್ತರುಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ. ಈ ಸಂಬಂಧ ವಾರ್ಡ್‌ವಾರು ರಸ್ತೆ ಕತ್ತರಿಸಲು ಅನುಮತಿ ನೀಡಿ ರಸ್ತೆ ಶುಲ್ಕ ವಸೂಲು** ಮಾಡಿರುವ ಶುಲ್ಕದಲ್ಲಿ ವಾರ್ಡ್‌ವಾರು ರಸ್ತೆ ಕತ್ತರಿಸಿದ ಭಾಗಗಳನ್ನು ಸರಿಪಡಿಸುವ ಸಲುವಾಗಿ ವಿನಿಯೋಗಿಸಲು ಅಗತ್ಯ ಕ್ರಮ ಕೈಗೊಳ್ಳುವುದು. ಈ ಪ್ರಕ್ರಿಯೆಗೆ ಅವಶ್ಯಕವಿರುವ ಆಡಳಿತಾತ್ಮಕ ಅನುಮೋದನೆಯನ್ನು ರಸ್ತೆ ಕತ್ತರಿಸಲು ಅನುಮತಿ ನೀಡುವಲ್ಲಿ ವಸೂಲಾಗುವ ಮೊತ್ತವನ್ನು ಮೀರದಂತೆ ನೀಡುವುದು. ವಲಯ ಕಾಮಗಾರಿ ಇಲಾಖೆ ಅಧಿಕಾರಿಗಳು ರಸ್ತೆ ಕತ್ತರಿಸಿದ ಭಾಗಗಳನ್ನು ವಿಶಿಷ್ಟ ವಿವರಣೆಯಂತೆ (As per IRC: 98-1997) ದುರಸ್ಥಿಗೊಳಿಸಲು ಅಗತ್ಯ ಕ್ರಮ ವಹಿಸುವುದು.

ಇದರ ಜೊತೆಗೆ ವಾರ್ಡ್ ಅನುದಾನದಲ್ಲಿ (POW) ತುರ್ತು ಕಾಮಗಾರಿಗಳಿಗೆಂದು ಮೀಸಲಿರಿಸಿರುವ ಅನುಧಾನದಲ್ಲಿ ಸಹ ರಸ್ತೆ ಗುಂಡಿಗಳನ್ನು ಮುಚ್ಚಲು ಹಾಗೂ ಪಾಲಿಕೆ ಕಟ್ಟಡಗಳ ನಿರ್ವಹಣೆಗೆ ಬಳಸಿಕೊಂಡು ಎಲ್ಲಾ ಕಟ್ಟಡಗಳನ್ನು ಸುಸ್ಥಿಯಲ್ಲಿಡಬೇಕೆಂದು ಸೂಚಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಿಶೇಷ ಆಯುಕ್ತರು(ಯೋಜನೆ)/ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಎಲ್ಲಾ ಜಂಟಿ/ಅಪರ ಆಯುಕ್ತರು ರವರಿಗೆ ಸೂಕ್ತ ಕ್ರಮಕ್ಕಾಗಿ.
4. ಪ್ರಧಾನ ಅಭಿಯಂತರರವರ ಮಾಹಿತಿಗೆ ಮತ್ತು ಸೂಕ್ತ ಕ್ರಮಕ್ಕಾಗಿ.
5. ಎಲ್ಲಾ ಮುಖ್ಯ ಅಭಿಯಂತರರುಗಳಿಗೆ ಸೂಕ್ತ ಕ್ರಮಕ್ಕಾಗಿ.
6. ಮುಖ್ಯ ಲೆಕ್ಕಾಧಿಕಾರಿಗಳು/ವಲಯ ರವರಿಗೆ ಸೂಕ್ತ ಕ್ರಮಕ್ಕಾಗಿ/ಮುಖ್ಯಲೆಕ್ಕ ಪರಿಶೋಧಕರು ರವರ ಮಾಹಿತಿಗಾಗಿ ಕಳುಹಿಸಿದೆ.
7. ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಸೂಕ್ತ ಕ್ರಮಕ್ಕಾಗಿ.

'Certified Copy'
K Madhu Kumar 20/3/14
ಪ್ರಧಾನ ಅಭಿಯಂತರರ ತಾಂತ್ರಿಕ ಸಹಾಯಕರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ